ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ eys. 1?? ದಿನಾಂಕ: .11.2017 6/12

## ಸಭೆಯ ನಡಾವಳಿಗಳು

ದಿನಾಂಕ 27/10/2017 ರಂದು ಮಡಿಕೇರಿ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ರಾಮಚಂದ್ರ :ಅಧೀಕ್ಷಕ ಇಂಜಿನಿಯರ್, ಚಾಮರಾಜನಗರ-ಕೊಡಗು ವೃತ್ತ
2. ಶ್ರೀಮತಿ ತಾರಾ :ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ.
3. ಶ್ರೀ ಬಿ ಸೋಮಶೇಖರ್ :ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ಮಡಿಕೇರಿ ವಿಭಾಗ
4. ಶ್ರೀ ಪಿ ಎನ್ ದೇವಯ್ಯ :ಸಕಾಇಂ(ವಿ), ಕಾ ಮತ್ತು ಪಾ ಮಡಿಕೇರಿ ವಿಭಾಗ
5. ಶ್ರೀ ದೊಡ್ಡಮನಿ :ಸಕಾಇಂ(ವಿ),ಕಾ ಮತ್ತು ಪಾ ಮಡಿಕೇರಿ ಉಪವಿಭಾಗ
6. ಕು. ವಿನುತಾ ಈ :ಸಇಂ(ವಿ), ಕಾ ಮತ್ತು ಪಾ ಉಪವಿಭಾಗ, ಮಡಿಕೇರಿ
7. ಶ್ರೀ. ಸಂಪತ್ ಎ.ಆರ್ :ಸಇಂ(ವಿ), ಕಾ ಮತ್ತು ಪಾ ಘಟಕ-1, ಮಡಿಕೇರಿ
8. ಶ್ರೀಮತಿ ಹರಿಣಾಕ್ಷಿ ಬಿ.ಎ. :ಕಿಇಂ(ವಿ), ಕಾ ಮತ್ತು ಪಾ ಘಟಕ, ಭಾಗಮಂಡಲ ಶಾಖೆ
9. ಶ್ರೀ. ಅನಿಲ್ ಕುಮಾರ್ :ಪ್ರ. ಕಿಇಂ(ವಿ), ಕಾ ಮತ್ತು ಪಾ ಘಟಕ, ಸಂಪಾಜೆ ಶಾಖೆ
10. ಶ್ರೀ ಹೇಮಂತ್ ಕುಮಾರ್ :ಪ್ರ. ಕಿಇಂ(ವಿ), ಕಾ ಮತ್ತು ಪಾ ಘಟಕ, ತಾಳತ್ಮನೆ ಶಾಖೆ
11. ಶ್ರೀಮತಿ ವಿಮಲ ಪಿ ಬಿ. :ಪ್ರ ಕಿಇಂ(ವಿ), ಕಾ ಮತ್ತು ಪಾ ಘಟಕ, ನಾಪೋಕ್ಲು ಶಾಖೆ
12. ಶ್ರೀಮತಿ ರತ್ನಮಂಜರಿ :ಹಿರಿಯ ಸಹಾಯಕರು, ಕಾ ಮತ್ತು ಪಾ ಉಪವಿಭಾಗ, ಮಡಿಕೇರಿ
13. ಶ್ರೀಮತಿ ಭವಿನಾ ಎ,ಕೆ :ಪ್ರ. ಹಿರಿಯ ಸಹಾಯಕರು, ಕಾ ಮತ್ತು ಪಾ ಶಾಖೆ, ಮೂರ್ನಾಡು

ಶ್ರೀ ರಾಮಚಂದ್ರ, ಅಧೀಕ್ಷಕ ಇಂಜಿನಿಯರ್, ಚಾಮರಾಜನಗರ-ಕೊಡಗು ವೃತ್ತ, ರವರು ಸಭೆಗೆ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು. ದಿನಾಂಕ 16/05/2017 ರಂದು ನಡೆದ ಜನಸಂಪರ್ಕ ಸಭೆಯ ನಡಾವಳಿಗಳನ್ನು ಓದಿ ಹಿಂದಿನ ಸಭೆಯಲ್ಲಿ ಜನರು ಸೂಚಿಸಿದ ದೂರುಗಳು ಹಾಗೂ ಪ್ರಗತಿಯ ಬಗ್ಗೆ ಈ ಕೆಳಕಂಡಂತೆ ಚರ್ಚಿಸಲಾಯಿತು.

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಪಿ.ಹೆಚ್.ಚಂಗಪ್ಪ, ಚೇರಂಬಾಣೆ ಗ್ರಾಮ, ಆರ್.ಆರ್. ಸಂಖ್ಯೆ: 79 | * ತೋಟದಲ್ಲಿರುವ ವಿದ್ಯುತ್ ಕಂಬಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸುವುದು. | * ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸಲು Intimation ನೀಡಲಾಗಿದೆ. |
| 2 | ಮೊಣ್ಣಪ್ಪ ಕಟ್ಟೆಮಾಡು, ಪಳಂಗಪ್ಪ ಕಟ್ಟಮಾಡು, ರಾಮಚ್ಚ ಕಟ್ಟೆಮಾಡು, ಜೀವನ್ ಕಟ್ಟೆಮಾಡು, ಜಂಸಿ ಕಟ್ಟೆಮಾಡು, ಚಿಣ್ಣಪ್ಪ ಕಟ್ಟೆಮಾಡು, ಕಟ್ಟೆಮಾಡು ಗ್ರಾಮ, ಮಡಿಕೇರಿ ತಾಲ್ಲೂಕು | * ತೋಟದಲ್ಲಿರುವ ಎಲ್.ಟಿ. ವಿದ್ಯುತ್ ಮಾರ್ಗವನ್ನು ರಸ್ತೆ ಬದಿಗೆ ಸ್ಥಳಾಂತರಿಸುವುದು | * ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸಲು Intimation ನೀಡಲಾಗಿದೆ.. |
| 3 | ಭೋಪಣ್ಣ, ಬೆಟ್ಟಗೇರಿ ಗ್ರಾಮ, ಮಡಿಕೇರಿ | * ಬೆಟ್ಟಗೇರಿ ಪ್ರದೇಶದಲ್ಲಿ ವಿದ್ಯುತ್ ತಂತಿ ಜೋತು ಬಿದ್ದಿದ್ದು ಮದ್ಯಂತರ ಕಂಬಗಳನ್ನು ಅಳವಡಿಸುವುದು. | * ಮದ್ಯಂತರ ಕಂಬಗಳನ್ನು ಅಳವಡಿಸಲಾಗಿದೆ. |

DGM-MA-1 08/12 AGM-RAG 11/12

ದಿನಾಂಕ: 27.10.2017 ರಂದು ಪಡೆದ ದೂರುಗಳ ವಿವರ-

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಸತೀಶ್, ಕೊಡಗು ವಿದ್ಯಾಲಯ | ★ ತಮ್ಮ ಮನೆಯ ಗೋಡೆಗೆ, ಪಕ್ಕದ ಮನೆಯ ಸರ್ವೀಸ್ ಮೈನ್ ತಂತಿಯು ಹಾದುಹೋಗಿರುತ್ತದೆ.ಇದರಿಂದ ಅಪಾಯವಿದ್ದು ಸದರಿ ತಂತಿಯನ್ನು ಸ್ಥಳಾಂತರಿಸ ಬೇಕೆಂದು ದೂರಿದರು. | ★ ಸ್ಥಳ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಕಾ ಮತ್ತು ಪಾ ಘಟಕ-1 ರವರಿಗೆ ತಿಳಿಸಿದರು. |
| 2 | ಎಂ ವಿ ರಮೇಶ್, ಅಡಿಯರ ಕಾಲೋನಿ | ★ ಬಿದ್ದಂಡ ತಟ್ಟು ಕಾಲೋನಿಯ 12 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಮೋದನೆ ದೊರೆತಿದ್ದು, ಇನ್ನು ಆರು ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಅನುಮೋದನೆ ದೊರೆತಿರುವುದಿಲ್ಲಯೆಂದು ತಿಳಿಸಿದರು. | ★ ಅಧೀಕ್ಷಕ ಇಂಜಿನಿಯರ್(ವಿ) ರವರು ಉಳಿದ ಆರು ಮನೆಗಳಿಗೆ ಅರ್ಜಿಯನ್ನು ಉಪವಿಭಾಗದಲ್ಲಿ ನೋಂದಾಯಿಸಿ ವಿದ್ಯುತ್ ಸಂಪರ್ಕ ಪಡೆಯಲು ಸಲಹೆ ನೀಡಿದರು.. |
| 3 | ಶಾಂತಮ್ಮ, ಹಾಕತ್ತೂರು, ಆರ್.ಆರ್.ಸಂಖ್ಯೆ 31049 | ★ ಎಲ್.ಟಿ.ವಿದ್ಯುತ್ ಮಾರ್ಗವು ಎರಡು ತಿಂಗಳ ಹಿಂದೆಯೇ ಕಡಿತಗೊಂಡು, ತಮ್ಮ ಮನೆಗೆ ಎರಡು ತಿಂಗಳಿನಿಂದ ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂದು ದೂರಿದರು. ಇದರ ಬಗ್ಗೆ ಹಲವು ಬಾರಿ ಮಾರ್ಗದಾಳು ಕಾಳಪ್ಪ ರವರಿಗೆ ತಿಳಿಸಲಾಗಿದ್ದರು ಸಹ ಅವರು ಈ ಸಮಸ್ಯೆಯನ್ನು ಬಗೆಹರಿಸಿರುವುದಿಲ್ಲ ಎಂದು ದೂರಿದರು. | ★ ಕೂಡಲೇ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಮಡಿಕೇರಿ ರವರಿಗೆ ತಿಳಿಸಿದರು. |
| 4 | ಅಧ್ಯಕ್ಷರು, ದೊಡ್ಡಪುಲಿಕೋಟು ಗ್ರಾಮ ಪಂಚಾಯಿತಿ | ★ ದೊಡ್ಡಪುಲಿಕೋಟು ಗ್ರಾಮಕ್ಕೆ DDUGJY ಯೋಜನೆಯಡಿಯಲ್ಲಿ ವಿದ್ಯುತ್ ಮನವಿ ಮಾಡಿದರು | ★ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ಮಡಿಕೇರಿ ರವರಿಗೆ ತಿಳಿಸಿದರು. |
| 5 | ಕುಡಿಯರ ಮುತ್ತಪ್ಪ, ಕುಡಿಯರ ಕಾಲೋನಿ | ★ ಕುಡಿಯರ ಕಾಲೋನಿಯ ಕುಡಿಯರ ಕಾವೇರಪ್ಪ ರವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿದರು. | ★ ಅಧೀಕ್ಷಕ ಇಂಜಿನಿಯರ್(ವಿ) ರವರು ಅರ್ಜಿಯನ್ನು ಉಪವಿಭಾಗದಲ್ಲಿ ನೋಂದಾಯಿಸಿ ನಿಗಮದ ನಿಯಮಾನುಸಾರ ವಿದ್ಯುತ್ ಸಂಪರ್ಕ ಪಡೆಯಲು ಸಲಹೆ ನೀಡಿದರು. |
| 6 | ನರೇಂದ್ರ, ಮಡಿಕೇರಿ ನಗರ ಆರ್.ಆರ್.ಸಂಖ್ಯೆ 25699 | ★ ಸದರಿ ರವರು 2011 ರಲ್ಲಿ ಬಿ.ಬಿ.ಸಿಯ ಗೊಂದಲದ ಬಗ್ಗೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತಾರೆ. ಅವರಿಗೆ ಈ ದಿನದ ವರೆಗೂ ನ್ಯಾಯಾಲಯದಲ್ಲಿ ಕೇಸ್ ಇತ್ಯರ್ಥವಾಗಿರುವುದಿಲ್ಲ ಎಂದು ದೂರಿದರು. | ★ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಮಡಿಕೇರಿ ರವರಿಗೆ ತಿಳಿಸಿದರು. |
| 7 | ಎಂ.ಕೆ.ಖಾನ್, ರಾಣಿಪೇಟೆ | ★ ತಮ್ಮ ಮನೆಯ ಮುಂಬಾಗ ಪಕ್ಕದ ಮನೆಯ ಸರ್ವೀಸ್ ಮೈನ್ ತಂತಿಯು ಹಾದುಹೋಗಿರುತ್ತದೆ. ಇದರಿಂದ ಅಪಾಯವಿದ್ದು ಸದರಿ ತಂತಿಯನ್ನು ಸ್ಥಳಾಂತರಿಸ ಬೇಕೆಂದು ದೂರಿದರು. | ★ ಸ್ಥಳ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಕಾ ಮತ್ತು ಪಾ ಘಟಕ-1 ಶಾಖಾಧಿಕಾರಿ ರವರಿಗೆ ತಿಳಿಸಿದರು. |
| 8 | ಡಿ.ಎನ್.ಮಂಜುನಾಥ್, ಮಹಾದೇವಪೇಟೆ | ★ ತಮ್ಮ ಮನೆಯ ಮುಂಬಾಗದಲ್ಲಿರುವ ಪರಿವರ್ತಕವನ್ನು ಸ್ಥಳಾಂತರಿಸಬೇಕೆಂದು ಮನವಿ ಮಾಡಿದರು | ★ ಸ್ಥಳ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಕಾ ಮತ್ತು ಪಾ ಘಟಕ-1 ಶಾಖಾಧಿಕಾರಿ ರವರಿಗೆ ತಿಳಿಸಿದರು. |

| | | | |
|---|---|---|---|
| 9 | ಸಿ.ಎಸ್.ಸೋಮೇಶ್, ಮುಟ್ಲು ಗ್ರಾಮ | ★ ಮಾಪಕ ಓದುವಿಕಯ ನ್ಯೂನತಗಳ ಬಗ್ಗ ದೂರಿದರು.<br>★ ಮುಟ್ಲು, ಮುಕ್ಕೋಡ್ಲು, ಗಾಳಿಬೀಡು ಹಾಗೂ ಸುತ್ತಮುತ್ತ ಪ್ರದೇಶಗಳಿಗೆ ಹಲವು ತಿಂಗಳಿನಿಂದ ಮಾಪಕ ಓದುಗರು ಬಂದಿರುವುದಿಲ್ಲ ಎಂದು ಅಸಮಾಧಾನ ವ್ಯಕ್ತ ಪಡಿಸಿದರು. | ★ ಪ್ರತಿ ತಿಂಗಳು ವಿದ್ಯುತ್ ಬಿಲ್ ನೀಡಲು ಕ್ರಮ ತೆಗೆದುಕೊಳ್ಳಲು ಸಹಾಯಕ ಕ್ಕಾರ್ಯಪಾಲಕ ಅಭಿಯಂತರರು, ಮಡಿಕೇರಿ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ನಿರ್ದೇಶಿಸಿದರು. |
| 10 | ಹರಿಶ್ಚಂದ್ರ, ಮಡಿಕೇರಿ, ಆರ್.ಆರ್.ಸಂಖ್ಯೆ 2288 | ★ ಮಾಪಕ ಓದುವಿಕೆಯ ನ್ಯೂನತೆಗಳ ಬಗ್ಗೆ ದೂರುತ್ತಾ, ಪ್ರತಿ ತಿಂಗಳು ವಿದ್ಯುತ್ ಬಿಲ್ ನೀಡದೇ ಇರುವುದರಿಂದ ಒಂದೇ ಬಾರಿಗೆ ವಿದ್ಯುತ್ ಬಿಲ್ ನೀಡಿದಲ್ಲಿ ಸ್ಲಾಬ್ ಸಮಸ್ಯೆಯಿಂದ ವಿದ್ಯುತ್ ಬಿಲ್ ಪಾವತಿ ಮಾಡಲು ಜನರಿಗೆ ಹೊರೆಯಾಗುವುದಾಗಿ ತಿಳಿಸಿದರು | ★ ಪ್ರತಿ ತಿಂಗಳು ವಿದ್ಯುತ್ ಬಿಲ್ ನೀಡಲು ಕ್ರಮ ತೆಗೆದುಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಡಿಕೇರಿ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ನಿರ್ದೇಶಿಸಿದರು |
| 11 | ಕಮಲಕಣ್ಣನ್, ಕಾಟಕೇರಿ ಗ್ರಾಮ | ★ ತಮ್ಮ ಕುಡಿಯುವ ನೀರಿನ ಸ್ಥಾವರಕ್ಕೆ 40 ದಿನಗಳಿಂದ ಸಿಂಗಲ್ ಫೇಸ್ ಆಗಿದ್ದು, ಸದರಿ ಸಮಸ್ಯೆಯ ಬಗೆಹರಿಸಲು ಮಾರ್ಗದಾಳು ಕುಮಾರ್ ರವರು 3000/- ರುಪಾಯಿ ಪಡೆದಿರುತ್ತಾರೆ ಹಾಗೂ ಸಮಸ್ಯಯ ಕೂಡಾ ಬಗೆಹರಿದಿರು ವುದಿಲ್ಲ ಎಂದು ದೂರಿದರು. | ★ ಸ್ಥಳ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಹಾಗೂ ಮಾರ್ಗದಾಳು ಕುಮಾರ್ ರವರಿಗೆ ಹಣ ಪಡೆದಿರುವ ಬಗ್ಗೆ ನೋಟೀಸ್ ನೀಡುವಂತೆ ಅಧೀಕ್ಷಕ ಇಂಜನಿಯರ್(ವಿ) ರವರು ಶಾಖಾಧಿಕಾರಿ ತಾಳತ್‌ಮನೆ ಶಾಖೆ ರವರಿಗೆ ತಿಳಿಸಿದರು. |
| 12 | ಗಣಪತಿ ಎಸ್ ನಾಪೋಕ್ಲು | ★ ತಮ್ಮ ಮನೆ ಹತ್ತಿರ ಕಂಬ ಮುರಿದು ಎರಡು ವರ್ಷಗಳಾದರು ಇನ್ನು ಕಂಬ ಬದಲಾಯಿಸದಿರುವ ಬಗ್ಗೆ ದೂರಿದರು | ★ ಸ್ಥಳ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ನಾಪೋಕ್ಲು ಶಾಖಾಧಿಕಾರಿ ರವರಿಗೆ ತಿಳಿಸಿದರು. |

ಅಧೀಕ್ಷಕ ಇಂಜನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

<u>ಪ್ರತಿಯನ್ನು:</u> ಮಾಹಿತಿಗಾಗಿ ಸಲ್ಲಿಸಲಾಗಿದೆ.

1. ಮುಖ್ಯ ಇಂಜನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾ.ವಿ.ಸ.ನಿ.ನಿ., ಮಡಿಕೇರಿ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.